

# ರಾಮಕೃಷ್ಣ ಮಠ ಮತ್ತು ಮಿಷನ್
# ಯಾದಾದ್ರಿ, ಭುವನಗಿರಿ - ಅಂತರಂಗದ ಬದುಕಿಗೆ ಆಶ್ರಯ ತಾಣ

**ಸ್ವಾಮಿ ಸತ್ಯೇಶಾನಂದ**

ಆಧ್ಯಾತ್ಮಿಕ ಜೀವನವನ್ನು ನಡೆಸುವ ವ್ಯಕ್ತಿಯು ಏಕಾಂತವಾಸ ಮಾಡುತ್ತ ಅಂತರಂಗದ ಅನ್ವೇಷಣೆ ಮಾಡಬೇಕು ಎನ್ನುತ್ತಾರೆ ಶ್ರೀರಾಮಕೃಷ್ಣರು. ಇದಕ್ಕೆ ಅನುಕೂಲವಾಗುವಂತೆ ನಿರ್ಮಾಣಗೊಂಡಿರುವ ಆಶ್ರಮವೊಂದರ ಪರಿಚಯ ಇಲ್ಲಿದೆ. ಲೇಖಕರು ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾಗಿದ್ದು, ಬೇಲೂರು ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ರಾಮಕೃಷ್ಣ ವಿದ್ಯಾಶಾಲೆಯ ಸಂಚಾಲಕರಾಗಿದ್ದ ಅವರು ಉತ್ತಮ ವಾಗ್ಮಿ ಕೂಡ ಹೌದು.

ಯಾದಾದ್ರಿ, ಭುವನಗಿರಿ ಆಶ್ರಮವು ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ ಕನಸಿನ ಕೂಸು. ಎಲ್ಲ ಆಧ್ಯಾತ್ಮಿಕ ಸಾಧಕರಿಗೆ ಇದು ಅವರ ಪ್ರೀತಿಯ ಕೊಡುಗೆ. ಇಲ್ಲಿನ ವಿಸ್ತಾರವಾದ ಅರಣ್ಯ ಪರಿಸರವು ಮನಸ್ಸನ್ನು ಸಹಜವಾಗಿಯೇ ಶಾಂತಗೊಳಿಸುವುದು. ಆಧುನಿಕರಿಗೆ, ವಿಶೇಷವಾಗಿ ಬಾಳಿನ ಸಂಜೆಯ ಹೊತ್ತಿನಲ್ಲಿ ಜೀವಿಸುತ್ತಿರುವವರಿಗೆ, ಆಂತರಿಕ ಉನ್ನತಿಯಾಗಲು ತಕ್ಕ ರೀತಿಯ ಆಧ್ಯಾತ್ಮಿಕ ಸಾಧನೆಗೆ ಅನುಕೂಲವಾಗುವಂತೆ ಈ ಕೇಂದ್ರವನ್ನು ನಿರ್ಮಿಸುವುದು ಪೂಜ್ಯ ಸ್ವಾಮೀಜಿಯವರ ಉದ್ದೇಶವಾಗಿತ್ತು. ಈ ಆಶ್ರಮವು ಒಮ್ಮೆಲೇ ಹಿಮಾಲಯದ ಮಡಿಲಲ್ಲಿರುವ ಮಾಯಾವತಿ ಅದ್ವೈತ ಆಶ್ರಮವನ್ನು ನೆನಪಿಗೆ ತರುವುದು. ಸ್ವಾಮಿ ವಿವೇಕಾನಂದರ ಕನಸು ಸಾಕಾರಗೊಂಡು ಅದ್ವೈತ ಆಶ್ರಮ ನಿರ್ಮಾಣಗೊಂಡಿತ್ತು. ಹಿಮಾಲಯದಲ್ಲಿ ಒಂದು ಆಶ್ರಮವಿರಬೇಕೆಂಬ ಸ್ವಾಮೀಜಿಯವರ ಕನಸನ್ನು ಸಾಕಾರಗೊಳಿಸಿದವರು ಅವರ ಶ್ರದ್ಧಾವಂತ ಶಿಷ್ಯಂದಿರಾದ ಕ್ಯಾಪ್ಟನ್ ಸೇವಿಯರ್ ಹಾಗೂ ಅವರ ಪತ್ನಿ ಶ್ರೀಮತಿ ಸೇವಿಯರ್. ಅದೇ ರೀತಿ, ಪ್ರಾಮಾಣಿಕರಾದ ಆಧ್ಯಾತ್ಮಿಕ ಸಾಧಕರಿಗೆ - ವಿಶೇಷವಾಗಿ ವೃದ್ಧರಿಗಾಗಿ ಮೀಸಲಾಗಿರುವ ಒಂದು ಸಾಧನ ಕೇಂದ್ರವಿರಬೇಕೆಂಬ ಸ್ವಾಮಿ ರಂಗನಾಥಾನಂದಜಿಯವರ ಕನಸನ್ನು ಸಾಕಾರಗೊಳಿಸಿದ ಕೀರ್ತಿಯು ಅವಿಶ್ರಾಂತವಾಗಿ ದುಡಿದ ಭಕ್ತರ ಬಳಗವೊಂದಕ್ಕೆ ಸಲ್ಲುತ್ತದೆ.

ಎಲ್ಲರಿಗೂ ತಿಳಿದಿರುವಂತೆ, ಸ್ವಾಮಿ ರಂಗನಾಥಾನಂದಜಿಯವರು '**ಅಮರ ಭಾರತ**'ದ ಆಧ್ಯಾತ್ಮಿಕ ಸಂದೇಶವನ್ನು ಜಗತ್ತಿನೆಲ್ಲೆಡೆ ಬಿತ್ತರಿಸಿದ ಮಹಾವ್ಯಕ್ತಿಗಳಲೊಬ್ಬರು. ಅವರು ವೇದಾಂತ ಹಾಗೂ ರಾಮಕೃಷ್ಣ-ವಿವೇಕಾನಂದರ ಶಕ್ತಿದಾಯಕ, ವಿಶ್ವವ್ಯಾಪಕ ಸಂದೇಶವನ್ನು ಭಾರತ ಹಾಗೂ ಇತರ ಅನೇಕ ದೇಶಗಳಲ್ಲಿ ಅಸಾಧಾರಣ ಶಕ್ತಿ, ಉತ್ಸಾಹ, ಸ್ಫೂರ್ತಿಯಿಂದ ಹರಡಿದ್ದಾರೆ. ಇದರೊಂದಿಗೆ, ದೀನದಲಿತರ ಹಾಗೂ ಬಡವರ ಕಷ್ಟಕಾರ್ಪಣ್ಯಗಳ ಬಗ್ಗೆ ಅವರಿಗೆ ಅಪಾರ ಕಾಳಜಿಯಿತ್ತು. ಅವರ ವಿಶಾಲ ಹೃದಯ, ಅನುಕಂಪ ಸದಾ ಅವರನ್ನು ಕುರಿತು ಮಿಡಿಯುತ್ತಿತ್ತು. ಸಮಾಜದ ಕೆಳಸ್ತರದ ಜನರ, ಮಹಿಳೆಯರ ಪ್ರಗತಿಗಾಗಿ ಅವರು ವಿಶೇಷ ಕಾಳಜಿ ವಹಿಸಿದ್ದರು. ವಿವಿಧ ದೇಶಗಳ ಜನರ ಸಾಮಾಜಿಕ, ಆಧ್ಯಾತ್ಮಿಕ ಬೆಳವಣಿಗೆಗಾಗಿ ಅವರ ಕೊಡುಗೆ ಅಸಾಧಾರಣವಾದುದು. ಭಾರತ ಹಾಗೂ ವಿದೇಶಗಳಲ್ಲಿ ಅವರ ಶುದ್ಧಚಾರಿತ್ರ್ಯ, ಸ್ಫೂರ್ತಿದಾಯಕ ಪ್ರವಚನಗಳು ಅಸಂಖ್ಯಾತ ಜನರ ಜೀವನವನ್ನೇ ಪರಿವರ್ತಿಸಿವೆ. ಅವರು ಪ್ರೀತಿ, ಪರಿಶುದ್ಧತೆ ಹಾಗೂ

ಸಕಾರಾತ್ಮಕ ಭಾವಗಳನ್ನು ಹೊರಸೂಸುತ್ತಿದ್ದರು. ಈ ಯಾದಾದ್ರಿ–ಭುವನಗಿರಿ ಆಶ್ರಮವು ಪ್ರಾಮಾಣಿಕವಾಗಿ ಆಧ್ಯಾತ್ಮಿಕ ಜೀವನವನ್ನರಸಿ ಬಂದವರಿಗಾಗಿ ಆ ಮಹಾಪುರುಷರು ವ್ಯಕ್ತಪಡಿಸಿದ ಪ್ರೀತಿಯ ಮೂರ್ತರೂಪವೇ ಆಗಿದೆ.

ಅದು ೧೯೮೭ನೇ ಇಸವಿ. ಆಗ ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದಜಿಯವರು ಕೆಲವು ಮಂದಿ ನಿಕಟ ಭಕ್ತರೊಂದಿಗೆ ಹೈದರಾಬಾದಿನಿಂದ ೩೫ ಕಿ.ಮೀ. ದೂರದಲ್ಲಿದ್ದ ಕೀಸರಗುಟ್ಟ ಎಂಬ ಬೆಟ್ಟದಲ್ಲಿರುವ ಪ್ರಾಚೀನ ಶಿವ ದೇವಾಲಯಕ್ಕೆ ಭೇಟಿಯಿತ್ತರು.

ತೆಲಂಗಾಣ ಪ್ರಾಂತ್ಯವನ್ನಾಳಿದ ವಿಷ್ಣುಕುಂದಿನ್ ರಾಜರುಗಳು ಕ್ರಿ.ಶ. ೫ರಿಂದ ೭ನೇ ಶತಮಾನದ ಅವಧಿಯಲ್ಲಿ ಈ ಪ್ರಾಚೀನ ದೇವಾಲಯವನ್ನು ನಿರ್ಮಿಸಿದ್ದರು. ರಾಮಾಯಣ ಕಾಲದ ಪುರಾತನ ದೇಗುಲವೊಂದು ಇದ್ದ ಜಾಗದಲ್ಲೇ ಇಂದು ಈ ದೇವಾಲಯವಿರುವುದಾಗಿ ನಂಬಲಾಗಿದೆ. ಸಾಕ್ಷಾತ್ ಶ್ರೀ ರಾಮನೇ ಹಳೆಯ ದೇವಾಲಯವನ್ನು ನಿರ್ಮಿಸಿ, ಅಲ್ಲಿ ಶಿವ ಲಿಂಗವನ್ನು ಸ್ಥಾಪಿಸಿ ಪೂಜಿಸಿದನೆಂದೂ, ಆದ್ದರಿಂದ ಅದಕ್ಕೆ 'ರಾಮಲಿಂಗೇಶ್ವರ'ವೆಂದು ಹೆಸರಾಯಿತೆಂದೂ ಐಹಿತ್ಯವಿದೆ. ಹನುಮಂತನಿಗೆ ಹಿಮಾಲಯದಿಂದ ಒಂದು ವಿಶಿಷ್ಟ ಶಿವಲಿಂಗವನ್ನು ತರಲು ಆಜ್ಞೆ ಮಾಡಲಾಗಿತ್ತು. ಆದರೆ ಅವನಿಗೆ ಅಲ್ಲಿ ಆ ವಿಶಿಷ್ಟ ಲಿಂಗವನ್ನು ಗುರುತಿಸಲಾಗಲಿಲ್ಲ. ಹೀಗಾಗಿ ಅವನು ನೂರಾರು ಲಿಂಗಗಳನ್ನು ತಂದುಬಿಟ್ಟಿದ್ದ. ಆದರೆ ಲಿಂಗವನ್ನು ಸ್ಥಾಪಿಸಲು ಒಂದೇ ಲಿಂಗ ಬೇಕಿದ್ದುದರಿಂದ, ಉಳಿದ ಶಿವಲಿಂಗಗಳನ್ನು ಆ ಬೆಟ್ಟದಿಂದ ದೂರಕ್ಕೆ ಎಸೆಯಲಾಯಿತು. ಸಮೀಪದ ಹಳ್ಳಿಗೆ ಹನುಮಂತನ ಹೆಸರನ್ನೇ ಇಡಲಾಯಿತು. ಕೇಸರೀ ಸುತನಾದ ಹನುಮಂತನ ಹೆಸರು 'ಕೀಸರ' ಎಂದಾಯಿತು.

ಈ ಪ್ರದೇಶಕ್ಕೆ ಭೇಟಿ ನೀಡಿ, ಈ ಪವಿತ್ರಭೂಮಿಯ ಆಧ್ಯಾತ್ಮಿಕ ತರಂಗಗಳನ್ನು ಅನುಭವಿಸಿದ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು, ಅದು ಪುರಾತನ ಋಷಿಗಳು ತಪಸ್ಸು ಮಾಡಿದ ತಪೋಭೂಮಿ ಎಂಬುದಾಗಿ ಭಕ್ತರಿಗೆ ತಿಳಿಸಿದರು. ಸಮೀಪದಲ್ಲೆಲ್ಲಾದರೂ ಒಂದು ಜಮೀನನ್ನು ಕೊಂಡುಕೊಂಡು ಅಲ್ಲೊಂದು ಆಶ್ರಮವನ್ನು ಆರಂಭಿಸಲು ಅವರು ಭಕ್ತರಿಗೆ ಸೂಚಿಸಿದರು.

ಪೂಜ್ಯ ಸಾಮೀಜಿಯವರ ಮಾತಿನಿಂದ ಸ್ಫೂರ್ತಿ ಹೊಂದಿದ ಭಕ್ತರ ಬಳಗವು 'ರಾಮಕೃಷ್ಣ ವಾನಪ್ರಸ್ಥ–ಆಶ್ರಮ'ವೆಂಬ ಸಮಿತಿಯೊಂದನ್ನು ರಚಿಸಿ, ಆಶ್ರಮವನ್ನು ನಿರ್ಮಿಸಲು ಸೂಕ್ತವಾದ ಸ್ಥಳವನ್ನು ಹುಡುಕಲಾರಂಭಿಸಿತು. ಸಾಕಷ್ಟು ಹುಡುಕಿದ ಬಳಿಕ, ದೇವಾಲಯದಿಂದ ೭ ಕಿ.ಮೀ ದೂರದಲ್ಲಿರುವ ಪೆದ್ದಪರ್ವತಪುರ ಗ್ರಾಮದಲ್ಲಿ ಒಂದು ಜಮೀನು ಲಭಿಸಿತು. ಶ್ರೀ ಜಿ. ಹರಿಶ್ಚಂದ್ರ ರೆಡ್ಡಿಯವರು ೨೦ ಎಕರೆ ಜಮೀನಿನ ಸಂಪೂರ್ಣ ಮೊತ್ತವನ್ನು ಭರಿಸಿದರು. ಆಶ್ರಮದ ನಿರ್ಮಾಣಕ್ಕೆ ಒಂದು ಯೋಜನೆಯನ್ನು ತಯಾರಿಸಲಾಯಿತು. ೧೯೯೦ರ ಆಗಸ್ಟ್ ೧೧ರಂದು ಸ್ವಾಮಿ ರಂಗನಾಥಾನಂದಜಿಯವರು ೫೦೦ಕ್ಕೂ ಹೆಚ್ಚು ಮಂದಿ ಭಕ್ತರ ಸಮ್ಮುಖದಲ್ಲಿ ಆಶ್ರಮದ ಶಿಲಾನ್ಯಾಸವನ್ನು ನೆರವೇರಿಸಿ



ದರು. ಕೆಲವು ತಿಂಗಳ ನಂತರ, ಅಂದರೆ ೧೯೯೧ರ ಜನವರಿ ತಿಂಗಳಲ್ಲಿ ಆಗ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಆಶ್ರಮದ ಭೂಮಿಪೂಜೆಯನ್ನು ನೆರವೇರಿಸಿದರು.


ಒಂದು ಬಾರಿ ಆಶ್ರಮಕ್ಕೆ ಭೇಟಿ ನೀಡಿದಾಗ ಸ್ವಾಮಿ ರಂಗನಾಥಾನಂದಜಿಯವರು ಸಣ್ಣ ಒಂದು ದಿಬ್ಬವನ್ನೇರಿ, ಅಲ್ಲಿ ಧ್ಯಾನ ಮಾಡಿದರು. ಸಂದರ್ಭದಲ್ಲಿ ಆ ದಿಬ್ಬದ ಮೇಲೆ ಒಂದು ಮಂದಿರವನ್ನು ನಿರ್ಮಿಸುವಂತೆ ಅವರು ಭಕ್ತರಿಗೆ ತಿಳಿಸಿದರು. ಇಂದು ಆಶ್ರಮದ ಮಂದಿರವು ಸ್ವಾಮೀಜಿಯವರು ಆರಿಸಿದ ಆ ಸ್ಥಳದಲ್ಲೇ ನಿರ್ಮಿತವಾಗಿದೆ.

ವಿಶ್ವದಾದ್ಯಂತ ವಿವಿಧ ಶಾಖೆಗಳೊಂದಿಗೆ ಹರಡಿರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಉಪಾಧ್ಯಕ್ಷರಾಗಿದ್ದ, ಹಾಗೂ ಆಗ ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದಜಿಯವರು ಆಶ್ರಮದ ನಿರ್ಮಾಣದ ಮೊದಲ ಹಂತವನ್ನು ಉದ್ಘಾಟಿಸಿದರು. ಅದರೊಂದಿಗೆ, ಶ್ರೀರಾಮಕೃಷ್ಣ ಮಂದಿರಕ್ಕೆ ಹಾಗೂ ಶ್ರೀಶಾರದಾದೇವಿ ಗ್ರಾಮೀಣ ಆಸ್ಪತ್ರೆಗೆ ಶಿಲಾನ್ಯಾಸ ಮಾಡಿದರು. ಮುಂದಿನ ವರ್ಷಗಳಲ್ಲಿ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸ್ಮರಣಾನಂದಜಿ, ಸ್ವಾಮಿ ಗೌತಮಾನಂದಜಿ, ಸ್ವಾಮಿ ಗಿರೀಶಾನಂದಜಿ, ಸ್ವಾಮಿ ಸುವೀರಾನಂದಜಿ ಮುಂತಾದವರ ಭೇಟಿಯಿಂದ ಆಶ್ರಮವು ಪುನೀತವಾಯಿತು.

ಸುಮಾರು ೨೫ ವರ್ಷಗಳಿಂದ ವಾನಪ್ರಸ್ಥ-ಆಶ್ರಮವನ್ನು ನಡೆಸಿಕೊಂಡು ಬಂದ ನಂತರ, ಅದರ ಪದಾಧಿಕಾರಿಗಳು ಆ ಸಂಸ್ಥೆಯನ್ನು ೨೦೧೮ರಲ್ಲಿ ರಾಮಕೃಷ್ಣ ಮಿಷನ್ನಿಗೆ ಹಸ್ತಾಂತರಿಸಿದರು. ೨೦೧೮ರಿಂದ ೨೦೨೨ರ ವರೆಗೆ ಈ ಕೇಂದ್ರವು ಹೈದರಾಬಾದ್ ರಾಮಕೃಷ್ಣ ಮಠದ ಉಪ-ಕೇಂದ್ರವಾಗಿ ಕಾರ್ಯ ನಿರ್ವಹಿಸಿತು. ೨೦೨೨ರ ಜೂನ್ ತಿಂಗಳಲ್ಲಿ ಈ ಆಶ್ರಮವನ್ನು ಬೇಲೂರು ಮಠದ ಸಂಪೂರ್ಣ, ಸ್ವಾಯುತ್ತ ಶಾಖಾ ಕೇಂದ್ರವನ್ನಾಗಿ ಪರಿವರ್ತಿಸಲಾಯಿತು.

ಸಮಾಜದ ಬದಲಾಗುತ್ತಿರುವ ಅಗತ್ಯಗಳನ್ನು ಪರಿಗಣಿಸಿ, ರಾಮಕೃಷ್ಣ ಮಿಷನ್ನಿನ ಪದಾಧಿಕಾರಿಗಳು ಈ ಕೇಂದ್ರವನ್ನು ಆಧ್ಯಾತ್ಮಿಕ ಸಾಧಕರ ಅಗತ್ಯಗಳಿಗೆ ತಕ್ಕಂತೆ ಬಳಸಿಕೊಳ್ಳಲು ನಿರ್ಧರಿಸಿದ್ದಾರೆ. ಏಕಾಂತ ವಾಸದಲ್ಲಿ ಇದ್ದುಕೊಂಡು, ಕೆಲವು ದಿನಗಳ ಕಾಲ ಆಧ್ಯಾತ್ಮಿಕ ಸಾಧನೆಯನ್ನು ಮಾಡ ಬಯಸುವ ಸಾಧಕರಿಗೆ ಅನುಕೂಲವಾಗುವಂತೆ, ಆಶ್ರಮದ ನಿವಾಸಗಳನ್ನು ನವೀಕರಿಸಲಾಯಿತು.'ಮನೇ, ಬನೇ, ಕೋನೇ' ಅಂದರೆ ಮನದಲ್ಲಿ, ಬನದಲ್ಲಿ, ಏಕಾಂತದಲ್ಲಿ ಸಾಧನೆ ಮಾಡಬೇಕು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಈ ಅಗತ್ಯಗಳನ್ನು ಇಲ್ಲಿನ ಆಶ್ರಮವು ಪೂರೈಸುತ್ತದೆ. ಹಚ್ಚಹಸುರಿನ ಅರಣ್ಯ, ಕೊಳಗಳು, ಪ್ರತ್ಯೇಕ ಕೊಠಡಿಗಳು ಹಾಗೂ ಪ್ರಶಾಂತವಾದ ದೇವಾಲಯ ಇಲ್ಲಿದೆ.

ಸ್ವಾಮಿ ರಂಗನಾಥಾನಂದಜಿಯವರು ಗೃಹಸ್ಥಾಶ್ರಮವನ್ನು ಕುರಿತು ಹೇಳುತ್ತ, ''ಆಧುನಿಕ ಯುಗದಲ್ಲಿ ಗೃಹಸ್ಥರಿಗೆ ಜೀವನದಲ್ಲಿ ತಮ್ಮ ನಿಜವಾದ ಸ್ಥಾನ ಯಾವುದು ಎಂದು ತೋರಿಸಿಕೊಡಲು, ಹಾಗೂ ತಮ್ಮ ಗೌರವ-ಘನತೆಗಳನ್ನು ಕಂಡುಕೊಳ್ಳಲು ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಹಾಗೂ ಸ್ವಾಮಿ ವಿವೇಕಾನಂದರು ಮೈದೋರಿ ಬಂದಿ







ದ್ದಾರೆ. ಸ್ವತಃ ಶ್ರೀ ರಾಮಕೃಷ್ಣರೇ ಗೃಹಸ್ಥರಾಗಿದ್ದರು. ಶ್ರೀಶಾರದಾ ದೇವಿಯವರು ಗೃಹಿಣಿಯಾಗಿದ್ದರು. ಅವರಿಬ್ಬರೂ ಗೃಹಸ್ಥ ಧರ್ಮದ ಮಹತ್ವವನ್ನು ಉನ್ನತ ಹಂತಕ್ಕೇರಿಸಿದರು. ಇತ್ತೀಚಿನ ವರೆಗೂ ಗೃಹಸ್ಥರು ತಮ್ಮ ಮಹತ್ವವನ್ನು ಸರಿಯಾಗಿ ಅರಿತಿರ ಲಿಲ್ಲ. ನಾನು ಭಾರತದ ಎಲ್ಲೆಡೆ ಪ್ರಯಾಣ ಮಾಡಿದಾಗಲೆಲ್ಲ ಜನರು, 'ನಾವಂತೂ ಗೃಹಸ್ಥರು. ನಾವೇನು ಸಾಧಿಸಬಲ್ಲೆವು?' ಎಂದು ಹೇಳುತ್ತಿದ್ದುದನ್ನು ಕಂಡಿದ್ದೇನೆ. ಹೀಗೆ ಗೃಹಸ್ಥರು ತಮ್ಮನ್ನು ತಾವು ಅಲ್ಪರಾಗಿ ಕಾಣುತ್ತಿದ್ದಾರೆ. ಇದು ಸರಿಯಲ್ಲ. ಇದು ಶಾಸ್ತ್ರಗಳಿಗೆ ವಿರುದ್ಧ; ದೇಶದ ಪ್ರಗತಿಗೆ ಮಾರಕ. ಈ ಕಾರಣಕ್ಕಾಗಿಯೇ ಅವತಾರ ಪುರುಷರು ಜನ್ಮವೆತ್ತಿ ಬಂದು, ಗೃಹಸ್ಥರಿಗೆ ಆತ್ಮವಿಶ್ವಾಸ, ಆತ್ಮಗೌರವ ಹಾಗೂ ಶಕ್ತಿ – ಇವನ್ನು ತುಂಬುತ್ತಾರೆ. ಅವತಾರ ಪುರುಷರು ಕೂಡ ಗೃಹಸ್ಥರ ನಡುವೆ, ಕುಟುಂಬದಲ್ಲೇ ಹುಟ್ಟಿ ಬರುತ್ತಾರೆ. ಇಡೀ ಜಗತ್ತು, ಇಡೀ ಸಮಾಜ ಗೃಹಸ್ಥರನ್ನೇ ಆಶ್ರಯಿಸಿ ನಿಂತಿದೆ.''[೧]

ಸಮಾಜದಲ್ಲಿ ಎಲ್ಲರಿಗೂ ಆಹಾರ, ವಿದ್ಯಾಭ್ಯಾಸ – ಇವನ್ನು ಒದಗಿಸಿಕೊಡುವವರು ಗೃಹಸ್ಥರೇ ಆಗಿದ್ದಾರೆ. ಗೃಹಸ್ಥರು ಸಾಕಷ್ಟು ಪರಿಶ್ರಮ ವಹಿಸಿ ದುಡಿಯುತ್ತಾರೆ; ಅವರು ಎಂದಿಗೂ ತಮ್ಮನ್ನು ಅಲ್ಪರೆಂದು ತಿಳಿದುಕೊಳ್ಳಬಾರದು. ಸಮಾಜಕ್ಕೆ ತಾವು ನೀಡುವ ಕೊಡುಗೆಗಾಗಿ ಅವರು ಹೆಮ್ಮೆಪಟ್ಟುಕೊಳ್ಳಬೇಕು. ಗೃಹಸ್ಥರ ಸಾಮರ್ಥ್ಯದ ಮೇಲೆಯೇ ಸಮಾಜ ನಿಂತಿದೆ.[೨]

ಯಾದಾದ್ರಿ–ಭುವನಗಿರಿ ಆಶ್ರಮದಲ್ಲಿ ವಿವಾಹಿತರಿರಲಿ, ಅವಿವಾಹಿತರಿರಲಿ, ಯುವಕರಿರಲಿ–ವೃದ್ಧರಿರಲಿ – ಎಲ್ಲರೂ ಆಂತರಿಕ ಸಾಧನೆಯಲ್ಲಿ ಮುಳುಗಿ ಶಾಂತಿ, ಸಮಾಧಾನಗಳನ್ನು ಕಂಡುಕೊಳ್ಳಬಹುದು. ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾದಾದ್ರಿ ಭುವನಗಿರಿ ಆಶ್ರಮವು ಸ್ವಾಮಿ ರಂಗನಾಥಾನಂದಜಿಯವರು ಎಲ್ಲ ಆಧ್ಯಾತ್ಮಿಕ ಸಾಧಕರ ಮೇಲೆ ಹೊಂದಿದ್ದ ಅಪಾರ ಪ್ರೀತಿ, ಕಾಳಜಿಗಳೇ ಮೂರ್ತಿವೆತ್ತು ನಿಂತ ಸ್ಮಾರಕವೆಂಬಂತಿದೆ.[೩]

ಆಶ್ರಮದಲ್ಲಿ ಕೆಲವು ದಿನ ತಂಗಬಯಸುವವರು, ಆಶ್ರಮದ ಅಧ್ಯಕ್ಷರನ್ನು ಫೋನ್ ಅಥವಾ ಇ–ಮೇಲ್ ಮೂಲಕ ಸಂಪರ್ಕಿಸಬಹುದು: ಫೋನ್: 7901696801, ಇ–ಮೇಲ್: yadadri.bhuvanagiri@rkmm.org

---

೧ Swami Ranganathananda, Spiritual Life of the Householder (Kolkata: Advaita Ashrama, 2016)p.10

೨ ಅಲ್ಲೇ, p.12

೩ ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಾಯ ಮಾಡಿದ ಸ್ವಾಮಿ ಜ್ಞಾನದಾನಂದ, ಅಧ್ಯಕ್ಷರು, ಯಾದಾದ್ರಿ ಭುವನಗಿರಿ ಆಶ್ರಮ, ಸ್ವಾಮಿ ಸುನಿಶ್ಚಲಾನಂದ ಹಾಗೂ ಸ್ವಾಮಿ ಜ್ಞಾನಸುಧಾನಂದ ಇವರಿಗೆ ಲೇಖಕನು ಹೃತ್ಪೂರ್ವಕವಾಗಿ ಕೃತಜ್ಞನಾಗಿದ್ದಾನೆ.

